ಓ.ಎಸ್.ನಂ.364-2022
ಪಿ.ಡಬ್ಲು-3

ದಿ: 02-03-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು**</u>: ಪ್ರತಿವಾದಿಗಳ ಪರ ಶ್ರೀಯುತ ಎಂ.ಜಿ.ಕೆ ವಕೀಲರಿಂದ.

ನನಗೆ ವಾದಿಯು ಬಹಳ ಚೆನ್ನಾಗಿ ತಿಳಿದಿರುತ್ತಾರೆ. ನಾನು ಮತ್ತು ವಾದಿ ಒಟ್ಟಿಗೆ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಹೊಸಕೋಟೆಯಲ್ಲಿ ಸ್ವಂತ ಅಂಗಡಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಸ್ಕಂದ ಎನ್ನುವ ಹೆಸರಿನಲ್ಲಿ ಒಂದು ಅಂಗಡಿಯನ್ನು ನಡೆಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಯಾವುದರ ಸಲುವಾಗಿ ದಾವೆ ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

2. ಚೀಮಂಡಹಳ್ಳಿಯಿಂದ ಖಾಚಾರಕನಾಹಳ್ಳಿಗೆ 15 ಕಿ.ಮೀ ಅಂತರ ಇದೆ ಎಂದರೆ ಸರಿ. ವಾದಿಯು ಯಾವ ಜಮೀನಿನ ಕುರಿತು ದಾವೆ ದಾಖಲಿಸಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಜಮೀನ್ನನ್ನು ಪ್ರತ್ಯೇಕ್ಷವಾಗಿ ನೋಡಿರುವುದಿಲ್ಲ ಎಂದರೆ ಸರಿ. ರಾಮಯ್ಯರವರು ನಮ್ಮ ಊರಿನವರಾಗಿರುತ್ತಾರೆ. ಸದರಿ ರಾಮಯ್ಯರವರು ನನಗೆ ಪರಿಚಯಸ್ಥರಾದ ಮೇರೆಗೆ ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಜಮೀನ್ನನ್ನು ನಾನೇ ಕೊಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ದಾಖಲೆಗಳನ್ನು ನೋಡಿರುತ್ತೇನೆ ಮತ್ತು ಅವುಗಳನ್ನು ಓದಿರುವುದಿಲ್ಲ . ಆ ರೀತಿ ದಾವಾ ಆಸ್ತಿಯ ಕುರಿತು ಯಾವೆಲ್ಲಾ ದಾಖಲೆಗಳನ್ನು ನೋಡಿದ್ದೀರಿ ಎಂದು ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ.

3. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಓದಿರುವುದಿಲ್ಲ. ಖಾಚಾರಕನಾಹಳ್ಳಿಯಲ್ಲಿ ನನ್ನ ಸಂಬಂಧಿಕರು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಜಮೀನಿನ ಮಾಲೀಕರು ನಮ್ಮ ಊರಿನವರಾಗಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಜಮೀನಿನ ಮಾಲೀಕರ ಹೆಸರು ರಾಮಯ್ಯ. ಸದರಿ ರಾಮಯ್ಯರವರು ನಿಮ್ಮ ಊರಿನವರು ಎಂದು ತೋರಿಸುವ ಕುರಿತು ನಿಮ್ಮ ಬಳಿ ಯಾವುದಾದರು ದಾಖಲೆಗಳು ಇವೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ದಾಖಲೆಗಳು ಇರುತ್ತವೆ ಮತ್ತು ಅವುಗಳು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ.

4. ನನಗೆ ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಯಾವುದೇ ನೋಟಿಸ್ಸು ಬಂದಿರುವುದಿಲ್ಲ. ನನಗೆ ವಾದಿಯು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವಂತೆ ಕೇಳಿರುತ್ತಾರೆ. ನನಗೆ ದಾವಾ ಆಸ್ತಿಯ ಕುರಿತು ಯಾವುದೇ ಮಾಹಿತಿ ಇರದೇ ಇದ್ದರೂ ಶ್ರೀನಿವಾಸ್ ರವರು ನನ್ನ ಸ್ನೇಹಿತರಾದ ಮೇರೆಗೆ ಅವರಿಗೆ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದಲ್ಲಿ ಹಾಜರಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಜಮೀನು ಖರೀದಿಸುವ ಮತ್ತು ಮಾರಾಟ ಮಾಡಿಸುವ ವ್ಯವಹಾರ ತಿಳಿದಿರುವ ಮೇರೆಗೆ ದಾವಾ ಜಮೀನ್ನನ್ನು ವಾದಿಗೆ ಕೊಡಿಸಿಕೊಟ್ಟಿರುವುದಾಗಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮಗೆ ದಾವಾ ಜಮೀನಿನ ಸರ್ವೆ ನಂಬರ್ ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ೮ ವರ್ಷಗಳಾದ ಮೇರೆಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ದಾವಾ ಜಮೀನ್ನನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ರಾಗಿ ಬೆಳೆದಿದ್ದು ಕೊಯ್ಲಿನ ಸಮಯದಲ್ಲಿ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

ಆ ರೀತಿ ನನ್ನನ್ನು ವಾದಿಯು ಕ್ಯೊಯ್ಲಿನ ಸಮಯದಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಆ ರೀತಿ ವಾದಿಯು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದು ಹೇಳುವ ಜಮೀನಿನ ಸರ್ವೆ ನಂಬರ್ ತಿಳಿದಿರುವುದಿಲ್ಲ.

5. ನನಗೆ ಪಟೇಲ್ ಚಿಕ್ಕ ಅಪ್ಪಣ್ಣ ರವರ ಪರಿಚಯವಿಲ್ಲ. ನನಗೆ ಖಾಚಾರಕನಾಹಳ್ಳಿಯಲ್ಲಿ ಯಾರೊಬ್ಬರ ಪರಿಚಯ ಇರುವುದಿಲ್ಲ. ನೀವು ಖಾಚಾರಕನಾಹಳ್ಳಿಗೆ ಹೋಗಿರುವುದಿಲ್ಲ ಎಂದರೆ ಸಾಕ್ಷಿಯು ಜಮೀನು ಕೊಡಿಸುವ ಸಮಯದಲ್ಲಿ ಮತ್ತು ಬೆಳೆಯ ಕ್ಯೊಯ್ಲಲು ಸಮಯದಲ್ಲಿ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ಸಂಬಂಧಿಸಿದ ಜಮೀನು ಚೀಮಂಡಹಳ್ಳಿಯಲ್ಲಿರುತ್ತದೆ. ಪ್ರಸ್ತುತ ಪಟೇಲ್ ಚಿಕ್ಕ ಅಪ್ಪಣ್ಣರವರ ವಾರಸುದಾರರು ದಾವಾ ಜಮೀನಿನ ಸ್ವಾಧೀನತೆಯಲ್ಲಿದ್ದು ಮತ್ತು ನಾನು ವಾದಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರದೇ ಇದ್ದರೂ ನಾನು ವಾದಿಯು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದು ತೋರಿಸುವ ಕುರಿತು ದಾಖಲೆಗಳನ್ನು ಸೃಷ್ಟಿಸಲು ಸಹಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ಯಾರ ವಿರುದ್ದ ದಾವೆಯನ್ನು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.